# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## SC No. 41/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಸೋಮಣ್ಣ** | **PW -2** |
| ತಂದೆಯ ಹೆಸರು | : | **ಪೂವಯ್ಯ** | **CW -2** |
| ವಯಸ್ಸು | : | **40 ವರ್ಷ** | |
| ವೃತ್ತಿ | : | **ಚಾಲಕ** | |
| ವಾಸ | : | **ಕುಂದಚೇರಿ ಗ್ರಾಮ ಮಡಿಕೇರಿ ತಾಲ್ಲೂಕು** | |

**ಸಾಕ್ಷಿಯನ್ನು ದಿನಾಂಕ 13-01-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>**

1. ಪ್ರಾಸಾ -1 ನನಗೆ ತಂದೆಯಾಗಬೇಕು ಚಾಸಾ-3 ಮೀನಾಕ್ಷಿ ಇವರು ಮೃತ ನಂದಿಶ್ ಈತನ ಹಂಡತಿ ಯಾಗಬೇಕು ಮೃತ ನಂದೀಶ್ ನನಗೆ ಅಣ್ಣನಾಗಬೇಕು. ನನಗೆ ಚಾಸಾ-5 ರಿಂದ ಚಾಸಾ-10 ರವರ ಪರಿಚಯ ಇರುತ್ತದೆ, ಅವರು ಸಂಬಂಧಿಕರು ಇರುತ್ತಾರೆ. ಆರೋಪಿ ಉತ್ತಪ್ಪ ನನಗೆ ಅಣ್ಣನಾಗಬೇಕು.

2. ನನ್ನ ಅಣ್ಣ ನಂದೀಶ್ ಈತನು ಚಾಸಾ-3 ಮೀನಾಕ್ಷಿ ಇವರೊಂದಿಗೆ ಮದುವೆ ಆಗಿ ನಮ್ಮ ಮನೆಗೆ ಹೊಂದಿಕೊಂಡು ಇರುವ ಮನೆಯಲ್ಲಿ ವಾಸವಾಗಿದ್ದರು. ನಾನು, ನನ್ನ ತಂದೆ ತಾಯಿ ಮತ್ತು ಆರೋಪಿ ಉತ್ತಪ್ಪ ಒಂದೇ ಮನೆಯಲ್ಲಿ ವಾಸವಾಗಿದ್ದೆವು. ನನ್ನ ಅಣ್ಣ ನಂದೀಶ್ ಈತನು ಸುಮಾರು ಒಂದು ವರ್ಷದ ಹಿಂದೆ ಸಂತೆಗೆ ಎಂದು ಭಾಗಮಂಡಲಕ್ಕೆ ಹೋಗಿದ್ದನು. ಆರೋಪಿತನು ಮೃತ ನಂದೀಶ್ ಈತನಿಗೆ ಆಸ್ತಿ ವಿಚಾರದಲ್ಲಿ ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿ, ಕತ್ತಿಯಿಂದ ಕಡಿದು ಘೋರ ಪ್ರಮಾಣದ ಗಾಯಪಡಿಸಿರುವುದಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. ನನ್ನ ಅಣ್ಣ ನಂದೀಶನಿಗೆ

ಆರೋಪಿತನು ಹಲ್ಲೆ ಮಾಡಿದ ವಿಚಾರದಲ್ಲಿ ನಾನು ಶವ ಪಂಚನಾಮೆ ಕಾಲಕ್ಕೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಹಾಗೂ ಯಾವುದೇ ಮರುಹೇಳಿಕೆ ಕೊಟ್ಟಿರುವುದಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ</u>**

1. ಮೃತ ನಂದೀಶ ಹಾಗೂ ಆರೋಪಿ ಉತ್ತಪ್ಪ ಹಾಗೂ ನಮ್ಮ ನಡುವೆ ಆಸ್ತಿ ಪಾಲಿನ ವಿಚಾರದಲ್ಲಿ ಪ್ರತಿದಿನ ಗಲಾಟೆ ಆಗುತ್ತಿತ್ತು ಅದಕ್ಕೆ ಆರೋಪಿ ಮತ್ತು ನಂದೀಶರವರ ಮಧ್ಯೆ ವೈಮನಸ್ಸು ಎಂದು ಸೂಚಿಸುವುದು ಸರಿಯಲ್ಲ.

2. ದಿನಾಂಕ 25.11.2023 ರಂದು ಮೃತ ನಂದೀಶನು ಮನೆಗೆ ಬಂದು ಸಂಜೆ 7.30 ಗಂಟೆ ಸಮಯದಲ್ಲಿ ನನ್ನ ತಂದೆಯೊಂದಿಗೆ ಆಸ್ತಿ ಪಾಲಿನ ವಿಚಾರದಲ್ಲಿ ಜಗಳ ಮಾಡಿಕೊಂಡಿದ್ದನು ಎಂದು ಸೂಚಿಸುವುದು ಸರಿಯಲ್ಲ. ದಿನಾಂಕ 25.11.2023 ರಂದು ರಾತ್ರಿ 8.30 ಗಂಟೆಗೆ ಆರೋಪಿ ಉತ್ತಪ್ಪ ಮನೆಯ ಹೊರಗೆ ಬಂದು ನಂದೀಶನನ್ನು ಕರೆದು ನಿನಗೆ ಆಸ್ತಿಯಲ್ಲಿ ಪಾಲು ಬೇಕಾ ಎಂದು ಅವಾಚ್ಯವಾಗಿ ಬೋಳಿ ಮಗನೆ ಎಂದು ಬೈದು ನಿನಗೆ ಗತಿ ಕಾಣಿಸುತ್ತೇನೆ ಎಂದು ಕೊಲೆ ಮಾಡುವ ಉದ್ದೇಶದಿಂದ ಮನೆಯ ಒಳಗೆ ಹೋಗಿ ಕತ್ತಿಯನ್ನು ತಂದು ನಂದೀಶನ ತಲೆಗೆ ಕಡಿದು ತೀವ್ರ ಸ್ವರೂಪದ ಗಾಯ ಮಾಡಿ ಕತ್ತಿಯನ್ನು ಅಲ್ಲೆ ಬಿಸಾಡಿ, ಪುನಃ ಕೋವಿಯನ್ನು ತಂದು ನಂದೀಶನಿಗೆ ಹೊಡೆಯಲು ಬಂದಾಗ ನಾನು, ನಮ್ಮ ತಂದೆ ಮತ್ತು ಮಿನಾಕ್ಷಿ ಸೇರಿ ಆರೋಪಿಯಿಂದ ಕೋವಿಯನ್ನು ಕಸಿದುಕೊಂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಶವ ಪಂಚನಾಮೆ ಕಾಲಕ್ಕೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

3. ದಿನಾಂಕ 27.11.2023 ರಂದು ಮಧ್ಯಾಹ್ನ 12.51 ಗಂಟೆಗೆ ನನ್ನ ಅಣ್ಣ ನಂದೀಶನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದನು ಎಂದು ಸೂಚಿಸುವುದು ಸರಿಯಲ್ಲ.

4. ಈ ಬಗ್ಗೆ ನಾನು ಪೊಲೀಸರ ಮುಂದೆ ಶವ ಪಂಚನಾಮೆ ಕಾಲಕ್ಕೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಈಗೆ ಓದಿ ಹೇಳಿದಂತೆ "ನಾನು ಈ ಮೇಲಿನ ವಿಳಾಸದಲ್ಲಿ ................ ತಿಳಿಯ ಬಯಸುತ್ತೇನೆ ನೋಡಿದರೆ ಗುರುತಿಸುತ್ತೇನೆ" ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ-9** ಎಂದು ಗುರುತಿಸಲಾಯಿತು.
ಈ ಬಗ್ಗೆ ನಾನು ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಈಗೆ ಓದಿ ಹೇಳಿದಂತೆ "ನಾನು ಈ ಮೇಲಿನ ವಿಳಾಸದಲ್ಲಿ ................ ನೀಡಿದ ಮರು ಹೇಳಿಕೆ " ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ-10** ಎಂದು ಗುರುತಿಸಲಾಯಿತು.

ಆರೋಪಿತನು ನನ್ನ ಅಣ್ಣನಿಗೆ ಕೊಲೆ ಮಾಡಿದ್ದರು ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಓ.ಎಸ್.ಸಿ ರವರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.